# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ದೇವದುರ್ಗ

**ಸಿ.ಸಿ.ನಂ.438/2023**

ಪಿರ್ಯಾದುದಾರಃ ಗಬ್ಬೂರು ಪೊಲೀಸ್ ಠಾಣೆ

**ವಿರುದ್ಧ**

ಆರೋಪಿಃ 1. ಬಾಬುಗೌಡ @ ಬಾಪೂರಗೌಡ ತಂದೆ ಗಂಗಾಧರ,
ವಯಸ್ಸುಃ 37 ವರ್ಷ, ಉಃ ಕಿರಾಣಾ ಅಂಗಡಿ,
ವಾಸಸ್ಥಳಃ ಹುನಗುಂದ ಬಾಡ ಗ್ರಾಮ.

**<u>ದೋಷಾರೋಪಣೆ</u>**

ನಾನು ಹೆಚ್.ಎ ಸಾತ್ವಿಕ್ ದೇವದುರ್ಗದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಿಮ್ಮ ಮೇಲೆ ಈ ಕೆಳಗಿನಂತೆ ಆಪಾದನೆ ಹೋರಿಸುವುದೇನೆಂದರೆ.

ದಿನಾಂಕಃ 08.05.2021 ರಂದು ಸಂಜೆ 06.00 ಗಂಟೆ ಸಮಯದಲ್ಲಿ ಗಬ್ಬೂರು ಪೋಲಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹುನಗುಂದ ಗ್ರಾಮದಲ್ಲಿ ಆರೋಪಿತರಾದ ನೀವು ಕಿರಾಣಾ ಅಂಗಡಿ ಮಾಲೀಕರಿದ್ದು, ಕೋವಿಡ್-19 ವ್ಯಾಪಕವಾಗಿ ಹರಡುತ್ತಿದ್ದರು ಸಹ ಕಿರಾಣಾ ಅಂಗಡಿ ತೆರೆದು ಯಾವುದೇ ಸುರಕ್ಷತಾ ನಿಯಮಗಳನ್ನು ಪಾಲಿಸದೇ, ಸಾಮಾಜಿಕ ಅಂತರ ಕಾಪಾಡದೆ ಹಾಗೂ ಮಾಸ್ಕ್ ಧರಿಸದೆ ಸಾರ್ವಜನಿಕ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗಲು ಅನುಕೂಲ ಮಾಡಿ ಕೊಟ್ಟಿರುವಿರೆಂದು ಎಂದು ನಿಮ್ಮಗಳ ವಿರುದ್ದ ಭಾ.ದಂ.ಸಂ.ಕಲಂ.269 ರಡಿಯಲ್ಲಿ ಆಪಾದನೆಯನ್ನು ಹೊರಿಸಲಾಗಿದೆ.

2. ಸದರಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಕಿರಾಣಾ ಅಂಗಡಿ ಮಾಲೀಕರಿದ್ದು, ಕೋವಿಡ್-19 ವ್ಯಾಪಕವಾಗಿ ಹರಡುತ್ತಿದ್ದರು ಸಹ ಕಿರಾಣಾ ಅಂಗಡಿ ತೆರೆದು ಯಾವುದೇ ಸುರಕ್ಷತಾ ನಿಯಮಗಳನ್ನು ಪಾಲಿಸದೇ, ಸಾಮಾಜಿಕ ಅಂತರ ಕಾಪಾಡದೆ ಹಾಗೂ ಮಾಸ್ಕ್ ಧರಿಸದೆ ಸಾರ್ವಜನಿಕ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗಲು ಅನುಕೂಲ ಮಾಡಿ ಕೊಟ್ಟಿರುವಿರೆಂದು ಎಂದು ನಿಮ್ಮಗಳ ವಿರುದ್ದ ಭಾ.ದಂ.ಸಂ.ಕಲಂ.270 ರಡಿಯಲ್ಲಿ ಆಪಾದನೆಯನ್ನು ಹೊರಿಸಲಾಗಿದೆ.

ಪ್ರಶ್ನೆಃ1 ಈ ಮೇಲೆ ಓದಿ ಹೇಳಿದ ಅಪಾದನೆಗಳು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಶ್ನೆಃ2 ಸದರಿ ಅಪಾದನೆಗಳನ್ನು ನೀವು ಒಪ್ಪಿ ಕೊಳ್ಳುವಿರಾ?

ಆರೋಪಿಯ ಉತ್ತರಃ

ಪ್ರಶ್ನೆ-3ಃ ಸದರಿ ಅಪಾದನೆಗಳ ಬಗ್ಗೆ ನಿಮ್ಮ ವಿಚಾರಣೆ ಆಗಬೇಕೆ?

ಆರೋಪಿಯ ಉತ್ತರಃ

(ಸದರಿ ಆಪಾದನೆಯನ್ನು ಆರೋಪಿ/ಆರೋಪಿಗಳಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಆರೋಪಿತ/ರು ನೀಡಿದ ಉತ್ತರ/ಉತ್ತರಗಳನ್ನು ಸರಿಯಾಗಿ ದಾಖಲಿಸಿ ಕೊಳ್ಳಲಾಗಿದೆ ಎಂದು ದೃಡಿಕರಿಸಲಾಗಿದೆ.)

ದಿನಾಂಕಃ14-12-2023 ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಸ್ಥಳಃ ದೇವದುರ್ಗ ದೇವದುರ್ಗ.